# “ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆಯ ಕಾರ್ಯಚಟುವಟಿಕೆಗಳ ಒಂದು ನೋಟ”

 

ಭಾರತ ದೇಶವು ಭೌಗೋಳಿಕವಾಗಿ ಉಷ್ಣವಲಯದಲ್ಲಿ ಬರುತ್ತದೆ. ಕೃಷಿಯೇ ಇಲ್ಲಿನ ಜನರ ಮುಖ್ಯ ಕಸುಬು ಆಗಿದ್ದು, ಅದರಲ್ಲಿ ಮಳೆ ಆಧಾರಿತ ಕೃಷಿ ಮಾಡುವವರು ಹೆಚ್ಚು.ಇತ್ತೀಚಿನ ದಿನಗಳಲ್ಲಿ ಅನಿಶ್ಚಿತ ಮಳೆಗಾಲವನ್ನು ನಾವೆಲ್ಲ ನೋಡುತ್ತಿದ್ದು, ಮಳೆ ಬಂದರೂ ಬೆಳೆ ಗ್ಯಾರಂಟಿ ಇಲ್ಲ. ಮಳೆ ಇಲ್ಲದಿದ್ದಾಗ ಬರಗಾಲ ಛಾಯೆ ನಮ್ಮನ್ನು ಬಿಟ್ಟಿದ್ದಿಲ್ಲ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯನ್ನು ನಿಭಾಯಿಸಲು ಹೈನುಗಾರಿಕೆಯು ರೈತರ ಕೈ ಹಿಡಿದು, ಅವರ ಕುಟುಂಬದ ಆರ್ಥಿಕ ಸದೃಢತೆಯನ್ನು ಕಾಪಾಡಲು ಸದಾ ಕಾಮಧೇನುವಿನಂತೆ ರಕ್ಷಿಸುವಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ.

ಗ್ರಾಮೀಣ ಪ್ರದೇಶದ ಸಂಪನ್ಮೂಲಗಳಲ್ಲಿ ಪ್ರಾಣಿ ಸಂಪತ್ತು ಬಹು ಮುಖ್ಯ. ನಮ್ಮ ದೇಶದಲ್ಲಿ ಎಂತಹ ಕಡು ಬಡವ ಅಥವಾ ಭೂರಹಿತ ಕೂಲಿಗಾರನೂ ಕೂಡ ಒಂದು ನಾಟಿ ಹಸು/ಎಮ್ಮೆಯನ್ನು ಸಾಕಿರುತ್ತಾನೆ. ಆದರೆ ಅಪಾರ ಸಂಖ್ಯೆಯ ರೈತರು ಇವುಗಳನ್ನು ಲೆಕ್ಕಾಚಾರ ರಹಿತ ಸಾಂಪ್ರದಾಯಿಕ ಪದ್ಧತಿಯಲ್ಲಿ ಸಾಕಾಣಿಕೆ ಮಾಡುತ್ತಿದ್ದು, ಅವುಗಳಿಂದ ಬರುವ ಆದಾಯ ಕಡಿಮೆಯಿದ್ದು, ಅವುಗಳನ್ನು ಸುಧಾರಿಸುವ ಅವಶ್ಯಕತೆ ಎದ್ದು ಕಾಣುತ್ತದೆ. ರಾಜ್ಯದ ಪಶುಸಂಗೋಪನಾ ಇಲಾಖೆಯು ಇದರ ಬಗ್ಗೆ ತೀವ್ರ ಗಮನಹರಿಸಿ, ಘನೀಕೃತ ವೀರ್ಯ ಆಧಾರಿತ ಕೃತಕ ಗರ್ಭಧಾರಣಾ ತಂತ್ರಜ್ಞಾನವನ್ನು ಅಳವಡಿಸಿ ಗ್ರಾಮೀಣ ಪ್ರದೇಶದ ನಾಟಿ ಹಸು/ಎಮ್ಮೆಗಳ ತಳಿ ಸುಧಾರಣಾ ಪ್ರಕ್ರಿಯೆಯಲ್ಲಿ ತೊಡಗಿದೆ. ಚ.ರಾ.ಪಟ್ಟಣ ತಾಲ್ಲೂಕಿನಲ್ಲಿ ಒಟ್ಟು 48 ಸಂಸ್ಥೆಗಳಿದ್ದು ಗ್ರಾಮೀಣ ಭಾಗದ ಜಾನುವಾರುಗಳ ಆರೋಗ್ಯ ರಕ್ಷಣಾ ಕಾರ್ಯದ ನಿರಂತರ ಸೇವೆಯಲ್ಲಿ ತೊಡಗಿಸಿಕೊಂಡಿವೆ.

ವಿದೇಶಿ ತಳಿಗಳಲ್ಲಿ ಕಂಡುಬರುವ ಶೀಘ್ರ ಬೆಳವಣಿಗೆ ಶಕ್ತಿ, ಶೀಘ್ರ ಗರ್ಭಧಾರಣೆ, ವರ್ಷಕ್ಕೊಂದು ಕರು ಹಾಕುವ ಸಾಮರ್ಥ್ಯ, ಅಧಿಕ ಹಾಲು ಉತ್ಪಾದನಾ ಸಾಮರ್ಥ್ಯ, ತಿಂದ ಆಹಾರವನ್ನು ಹಾಲನ್ನಾಗಿ ಪರಿವರ್ತಿಸುವ ಶಕ್ತಿ ಮುಂತಾದ ಅಪೇಕ್ಷಿತ ಒಳ್ಳೆಯ ಗುಣವುಳ್ಳ ಹೋರಿಗಳಿಂದ ಸಂಗ್ರಹಿಸಿದ ಘನೀಕೃತ ವೀರ್ಯದಿಂದ ನಮ್ಮ ದೇಶೀಯ ಹಸುಗಳಲ್ಲಿ ಕೃತಕ ಗರ್ಭಧಾರಣೆ ಮಾಡಿ ಮಿಶ್ರ ತಳಿ ಹಸುಗಳನ್ನು ಉತ್ಪಾದಿಸಲು ಸಹಕಾರಿ. ಇದೇ ರೀತಿ

ನಮ್ಮಲ್ಲಿರುವ ಎಮ್ಮೆಗಳಲ್ಲಿ ಕೃತಕ ಗರ್ಭಧಾರಣಾ ವಿಧಾನದಿಂದ ಅವುಗಳ ಉತ್ಪಾದನಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಇಲಾಖೆಯು ನಿರ್ವಹಿಸುತ್ತಿದೆ.

## ಕೃತಕ ಗರ್ಭಧಾರಣಾ ವಿಧಾನದ ಸ್ಥೂಲ ಪರಿಚಯ

ಕೃತಕ ಗರ್ಭಧಾರಣಾ ವಿಧಾನವು ತಳಿ ಸುಧಾರಣಾ ತಂತ್ರಜ್ಞಾನದ ಒಂದು ದೊಡ್ಡ ಕ್ರಾಂತಿಯೆಂದರೆ ತಪ್ಪಾಗಲಾರದು. ಈ ವಿಧಾನದಲ್ಲಿ ವೀರ್ಯವನ್ನು ಉತ್ತಮ ಹೋರಿ ಅಥವಾ ಕೋಣಗಳಿಂದ ಕೃತಕ ಯೋನಿಯನ್ನು ಉಪಯೋಗಿಸಿ ಶೇಖರಿಸುತ್ತಾರೆ. ನಂತರ ಅದನ್ನು ವಿವಿಧ ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಿ ಕೆಲವು ರಾಸಯನಿಕಗಳನ್ನು ಮಿಶ್ರಣ ಮಾಡಿ ಪ್ಲಾಸ್ಟಿಕ್ ನಳಿಕೆಯಲ್ಲಿ ತುಂಬಲಾಗುತ್ತದೆ. ಹೀಗೆ ಪ್ರತಿ ನಳಿಕೆಯಲ್ಲಿ ಸುಮಾರು ೩೦ ಮಿಲಿ ವೀರ್ಯಾಣುಗಳು ಇರುವಂತೆ ನೋಡಿಕೊಳ್ಳಲಾಗುತ್ತದೆ. ಇವುಗಳನ್ನು ಬೆದೆಗೆ ಬಂದಿರುವ ಹಸು/ಎಮ್ಮೆಗಳಲ್ಲಿ ಗರ್ಭ ಧರಿಸಲು ಉಪಯೋಗಿಸಲಾಗುತ್ತದೆ. ವೀರ್ಯದ ಕೊಳವೆಗಳನ್ನು ಸಾರಜನಕ ದ್ರವದ ಸಹಾಯದಿಂದ ಘನೀಕೃತಗೊಳಿಸಿ ಹಲವಾರು ವರ್ಷಗಳ ಕಾಲ ಸಾರಜನಕ ದ್ರವದ ಜಾಡಿಗಳಲ್ಲಿ ಕೆಡದಂತೆ ಶೇಖರಿಸಿಡಬಹುದಾಗಿದೆ.

ಕೇವಲ ಜಾನುವಾರು ತಳಿ ಅಭಿವೃದ್ಧಿ ಮಾತ್ರ ನಶಿಸುವ ಅಂಚಿನಲ್ಲಿರುವ ಅತ್ಯುತ್ತಮ ಸ್ಥಳೀಯ ತಳಿಗಳಾದ ಎಎಂ.ಹೆಚ್ಆರ್ ರಾಸುಗಳ ವಂಶವಾಹಿನಿಗಳ ಸಂರಕ್ಷಣೆ ಕಾರ್ಯವನ್ನು ಸಹ ಮಾಡಲಾಗುತ್ತಿದೆ. ಜಾನುವಾರುಗಳಲ್ಲಿ ಸಂತಾನ ಅಭಿವೃದ್ಧಿಗೆ, ತಳಿಯ ಅಭಿವೃದ್ಧಿ, ಹೋರಿಗಳಿಂದ ಹರಡುವ ರೋಗಗಳನ್ನು ತಡೆಗಟ್ಟುವಿಕೆ ಹಾಗೂ ಕ್ಷೀರಕ್ರಾಂತಿಗೆ ಕೃತಕ ಗರ್ಭಧಾರಣೆ ತಂತ್ರಜ್ಞಾನದ ಕೊಡುಗೆ ಅಪಾರ.

## ಜಾನುವಾರುಗಳ ಆರೋಗ್ಯ ರಕ್ಷಣೆ



“ಇಂದಿನ ಕರುವೇ ನಾಳೆಯ ಹಸು” ಎಂಬ ನಾಣ್ಣುಡಿಯಂತೆ ಪ್ರತಿಯೊಂದು ಜಾನುವಾರುವಿನ ಆರೋಗ್ಯ ಕಾಪಾಡುವುದು ಬಹಳ ಮುಖ್ಯ. ಪ್ರಕೃತಿಯು

ಪ್ರತಿಯೊಂದು ಜೀವಿಗೂ ಕೂಡ ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಲು ಆಂತರಿಕ ರೋಗ ನಿರೋಧಕ ಶಕ್ತಿಯನ್ನು ನೀಡಿದೆ. ಆದರೆ ಕೆಲವೊಮ್ಮೆ ದೇಹದೊಳಗಿನ ಆಂತರಿಕ ಬದಲಾವಣೆಗಳಿಂದಾಗಿ ಅಥವಾ ಹವಾಮಾನ ವೈಪರೀತ್ಯಗಳಿಂದ ಅನೇಕ ಸಾಂಕ್ರಾಮಿಕ ರೋಗಗಳು/ಅಂಟುರೋಗಗಳು ನಮ್ಮ ಜಾನುವಾರುಗಳನ್ನು ಕಾಡಬಹುದು. ಅವುಗಳ ವಿರುದ್ಧ ಜಾನುವಾರುಗಳ ಸಂಪೂರ್ಣ ರಕ್ಷಣೆಗೆ ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಜಾನುವಾರುಗಳಲ್ಲಿ ಕಂಡುಬರುವ ಮುಖ್ಯ ರೋಗಗಳು :-

1) ಕಾಲು ಬಾಯಿ ಜ್ವರ : ಈ ರೋಗವು ವೈರಸ್‌ನಿಂದ ಬರುತ್ತದೆ. ಇದು ಮಿಶ್ರತಳಿಗಳ ಅಭಿವೃದ್ಧಿಗೆ ಮಾರಕವಾಗಿದೆ. ಈ ರೋಗವು ಗಾಳಿ, ಆಹಾರ ಹಾಗು ಪರಸ್ಪರ ಸಂಪರ್ಕದಿಂದ ಹರಡುತ್ತದೆ.

ಇದರ ರೋಗ ಲಕ್ಷಣಗಳು ಕೆಳಕಂಡಂತಿವೆ.

- $104^{\circ}$-$107^{\circ}$ ಫ್ಯಾರನ್ ಹೀಟ್ ಜ್ವರ
- ಬಾಯಿಯಿಂದ ಅಂಟುವ ಜೊಲ್ಲುರಸ
- ಬಾಯಿಯಲ್ಲಿ ಹಾಗೂ ಕಾಲುಗಳಲ್ಲಿ ಹುಣ್ಣು
- ಆಹಾರ ತಿನ್ನದಿರುವುದು
- ಕಾಲು ಕುಂಟುವಿಕೆ
- ಗರ್ಭ ಧರಿಸಿದ ರಾಸುಗಳಲ್ಲಿ ಕಂದು ಹಾಕುವಿಕೆ
- ಕೆಚ್ಚಲು ಹಾಗು ಮೊಲೆತೊಟ್ಟುಗಳ ಮೇಲೆ ಗಾಯ
- ಹಾಲು ಉತ್ಪಾದನೆಯಲ್ಲಿ ಕುಂಠಿತವಾಗುವುದು.

ರೋಗಕ್ಕೆ ಸೂಕ್ತವಾದ ಚಿಕಿತ್ಸೆ ಮಾಡಿಸುವುದು ಉತ್ತಮ. ಈ ರೋಗಕ್ಕೆ ನಮ್ಮ ಜಿಲ್ಲೆಯಲ್ಲಿ ಮುಂಜಾಗ್ರತೆಯಾಗಿ ಚುಚ್ಚುಮದ್ದು ಹಾಕಲು ಒಂದು ದೊಡ್ಡ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ.

ರೋಗವು ಸಂಪರ್ಕದಿಂದ ಹರಡುವುದರಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಗಡಿ ಭಾಗದ ಗ್ರಾಮಗಳಲ್ಲಿ ಜಾನುವಾರುಗಳಿಗೆ ಮುಂಜಾಗ್ರತಾ ಲಸಿಕೆ ಹಾಕಲು ತಾಲ್ಲೂಕಿನ ಸಿಬ್ಬಂದಿ ಟೊಂಕಕಟ್ಟಿ ಕೆಲಸ ಮಾಡುತ್ತಿದ್ದು ವಾರದಲ್ಲಿ ಎರಡು ದಿವಸ ಈ ಪವಿತ್ರ ಕೆಲಸದಲ್ಲಿ ತೊಡಗಿಸಿಕೊಂಡಿರುತ್ತಾರೆ. ವೃತ್ತಾಕಾರದ ಮಾದರಿಯಲ್ಲಿ ಲಸಿಕೆ ಕಾರ್ಯಕ್ರಮ ಮಾಡಿ ತಾಲ್ಲೂಕಿನ ಅಮೂಲ್ಯ ಪಶುಸಂಪತ್ತನ್ನು ಈ ಮಾರಕ ರೋಗದಿಂದ ರಕ್ಷಿಸುವುದು ಇಲಾಖೆಯ ಗುರಿಯಾಗಿದೆ.

**ಚಪ್ಪೆ ರೋಗ**

ಇದು ಬ್ಯಾಕ್ಟೀರಿಯಾದಿಂದ ಬರುವ ರೋಗವಾಗಿದೆ. ಇದು ಪ್ರಮುಖವಾಗಿ ಸಂಪರ್ಕದಿಂದ ಹರಡುತ್ತದೆ. ದಷ್ಟಪುಷ್ಟವಾದ ಪ್ರಾಣಿಗಳು ಈ ರೋಗದಿಂದ ನರಳುವುದು ಹೆಚ್ಚು.

ರೋಗದ ಲಕ್ಷಣಗಳು :

ಅತಿಯಾದ ಜ್ವರ, ಮಾಂಸಖಂಡದ ಭಾಗದಲ್ಲಿ ಊತವಿದ್ದು ಆ ಭಾಗವನ್ನು ಕೈಯಿಂದ ಸ್ಪರ್ಶಿಸಿದಾಗ ಗಾಳಿ ತುಂಬಿದ ಮುರಮುರ ಶಬ್ದದ ಅನುಭವವಾಗುತ್ತದೆ. ಈ

ರೋಗಕ್ಕೂ ಕೂಡ ಸೂಕ್ತ ಚಿಕಿತ್ಸೆ ಮಾಡಿಸುವುದು. ಮುಂಜಾಗ್ರತಾ ಲಸಿಕೆಯಿಂದ ಪ್ರಾಣಿಗಳನ್ನು ಈ ರೋಗದಿಂದ ಸಂರಕ್ಷಿಸಬಹುದು.

## ಗಂಟಲು ಬೇನೆ

ಇದೂ ಕೂಡ ಬ್ಯಾಕ್ಟೀರಿಯಾದಿಂದ ಬರುವ ರೋಗ. ಇದು ಸೋಕಿನಿಂದ ಆಹಾರ, ನೀರಿನ ಮೂಲಕ ಪ್ರಾಣಿಗಳಲ್ಲಿ ಹರಡುತ್ತದೆ. ಈ ರೋಗದಿಂದ ಬಳಲುವ ಪ್ರಾಣಿಗಳಲ್ಲಿ ವಿಪರೀತ ಜ್ವರ, ಕೆಂಪಾದ ಕಣ್ಣು ಹಾಗೂ ಮೂಗಿನಿಂದ ನೀರು ಸುರಿಯುತ್ತಿರುತ್ತದೆ. ಪ್ರಾಣಿಯ ಗಂಟಲು ಭಾಗದಲ್ಲಿ ಊತ ಕಾಣಿಸಿ ಉಸಿರಾಟಕ್ಕೆ ತೊಂದರೆಯಾಗುತ್ತದೆ. ಸೋಂಕಿನಿಂದ ರಾಸುಗಳು ಮೃತಪಡುತ್ತವೆ.

ಈ ರೋಗವನ್ನು ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸಬಹುದು. ಈ ರೋಗಕ್ಕೂ ಕೂಡ ಮುಂಜಾಗ್ರತಾ ಲಸಿಕೆ ನೀಡಿ ಜಾನುವಾರುಗಳನ್ನು ರಕ್ಷಿಸಬಹುದು.

## ಕೆಚ್ಚಲು ಬಾವು

ಹಾಲು ಕೊಡುವ ಹಸುವಿಗೆ ಕೆಚ್ಚಲಿನ ಆರೋಗ್ಯ ಕಾಪಾಡುವುದು ಬಹಳ ಮುಖ್ಯ. ಹೈನುಗಾರಿಕೆಯಲ್ಲಿ ಹಸುವಿನ ಕೆಚ್ಚಲು ಜೀವಂತ ರಾಸಿನ ಹೃದಯವಿದ್ದಂತೆ. ಅದು ರೋಗದಿಂದ ಕೆಟ್ಟರೆ ಇಡೀ ಜೀವಮಾನವೆಲ್ಲ ವ್ಯರ್ಥ. ಆದ್ದರಿಂದ ಅಧಿಕ ಹಾಗೂ ಆರೋಗ್ಯಕರ ಹಾಲು ಉತ್ಪಾದನೆಗೆ ಹಸುವಿನ ಕೆಚ್ಚಲನ್ನು ಸೋಂಕು ಹಾಗೂ ರೋಗಗಳಿಂದ ಕಾಪಾಡುವುದು ಅತೀ ಅವಶ್ಯಕವಾಗಿದೆ.

## ಪಿ.ಪಿ.ಆರ್

ಈ ರೋಗವು ಕುರಿ ಮತ್ತು ಮೇಕೆಗಳಲ್ಲಿ ವೈರಸ್‌ನಿಂದ ಬರುತ್ತದೆ. ಈ ರೋಗವು ಧೂಳು ಮತ್ತು ಶುಷ್ಕ ವಾತಾವರಣಗಳಲ್ಲಿ ರೋಗಗ್ರಸ್ಥ ಕುರಿ, ಮೇಕೆಗಳ ಮಲಮೂತ್ರದ ನೇರ ಸಂಪರ್ಕದಿಂದ ಬರುವ ಅಂಟು ಜಾಡ್ಯವಾಗಿದೆ.

ಈ ರೋಗಗಳಲ್ಲಿ ವಿಪರೀತ ಜ್ವರ, ಕಣ್ಣು ಮತ್ತು ಮೂಗಿನಿಂದ ಹಳದಿ ಕೀವು ಮಿಶ್ರಿತ ಗೀಜು ಕಾಣಿಸಿಕೊಂಡು ಕುರಿ, ಮೇಕೆಗಳು ಮೇವು ಬಿಟ್ಟು ನಿಶಕ್ತಿಯಿಂದ ಮಂಕಾಗುತ್ತವೆ. ತುಟಿ, ವಸಡು ಕೆಲವೊಮ್ಮೆ ನಾಲಿಗೆ ಮೇಲೆ ಹುಣ್ಣುಗಳಾಗಿರುತ್ತವೆ. ಬಾಯಿಂದ ಧಾರಾಕಾರವಾಗಿ ಕೀವು ಮಿಶ್ರಿತ ನೊರೆಯುಕ್ತ ಜೊಲ್ಲು ಸೋರುತ್ತಿರುತ್ತದೆ.

ಈ ರೋಗಕ್ಕೆ ನೋವು ನಿರೋಧಕ ಜ್ವರ ನಿಯಂತ್ರಕ ಔಷಧೋಪಚಾರ ಮಾಡಬೇಕು.

ಮುಂಜಾಗ್ರತೆಯಾಗಿ ಪಿ.ಪಿ.ಆರ್. ಲಸಿಕೆ ಹಾಕುವುದರಿಂದ ಈ ರೋಗವನ್ನು ತಡೆಗಟ್ಟಬಹುದು.

## ಆಸ್ಕ್ಯಾಡ್ ಕಾರ್ಯಕ್ರಮ (ಜಾನುವಾರು ರೋಗ ನಿಯಂತ್ರಣ)

ಭಾರತ ಸರ್ಕಾರದಿಂದ ಶೇ.75% ಮತ್ತು ಕರ್ನಾಟಕ ಸರ್ಕಾರದಿಂದ ಶೇ.25% ಧನ ಸಹಾಯದಿಂದ ತಾಲ್ಲೂಕು ಪಂಚಾಯತ್‌ಗಳಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮ ಇದಾಗಿದೆ.

ಈ ಕಾರ್ಯಕ್ರಮದ ಮೂಲ ಉದ್ದೇಶ :

ರೋಗ ಹತೋಟಿ ಮತ್ತು ರೋಗ ಮುಕ್ತ ವಲಯ ಹತೋಟಿ ಮತ್ತು ರೋಗ ಮುಕ್ತ ವಲಯ ನಿರ್ಮಾಣ ಮಾಡುವುದಾಗಿದೆ. ಈ ಕಾರ್ಯಕ್ರಮದಡಿಯಲ್ಲಿ

ಜಾನುವಾರುಗಳಲ್ಲಿ ಕಾಲುಬಾಯಿ ಜ್ವರ, ಪಿ.ಪಿ.ಆರ್.ರೋಗ ಹಾಗೂ ಗಳಲೆ ರೋಗದ ವಿರುದ್ಧ ಉಚಿತವಾಗಿ ಲಸಿಕೆ ಹಾಕಲಾಗುತ್ತಿದೆ.

## ರೈತರ ಭಾಗ್ಯಕ್ಕೆ ಕುರಿ ಸಂಗೋಪನೆ




ತಾಲ್ಲೂಕಿನಲ್ಲಿ ಕುರಿ ಸಾಕಾಣಿಕೆಗೆ ಉತ್ತಮ ವಾತಾವರಣವಿದೆ. ಕುರಿ ಸಾಕಾಣಿಕೆ ಲಾಭದಾಯಕ ಹಾಗು ಸುಲಭ. ಕುರಿಗಳನ್ನು ಮುಖ್ಯವಾಗಿ ಮಾಂಸ,ಉಣ್ಣೆ, ಚರ್ಮ ಮತ್ತು ಗೊಬ್ಬರಗಳಿಗಾಗಿ ಸಾಕಬಹುದಾಗಿದೆ.

ಕುರಿಗಳು ಎಂತಹ ಸಂಕಷ್ಟ ಸಮಯದಲ್ಲೂ ಬದುಕಿ ಉಳಿಯಬಲ್ಲವು, ಅವುಗಳಿಗೆ ಹೆಚ್ಚಿನ ನೀರಿನ ಅವಶ್ಯಕತೆ ಇರುವುದಿಲ್ಲ. ಆಧುನಿಕ ತಂತ್ರಜ್ಞಾನ, ಆಹಾರ ವಿಜ್ಞಾನ ಹಾಗು ತಳಿ ಅಭಿವೃದ್ಧಿ ಜ್ಞಾನವನ್ನು ಅಳವಡಿಸಿ ಕುರಿಗಳನ್ನು ಸಾಕಿದರೆ ಹೆಚ್ಚಿನ ಲಾಭಗಳಿಸಬಹುದು. ಇಂದು ಕುರಿ ಸಾಕಾಣಿಕೆಯ ಅಲೆಮಾರಿ ಜನರಿಗೆ ಕೃಷಿ ಕೂಲಿ ಕಾರ್ಮಿಕರಿಗೆ ಹಾಗು ಆರ್ಥಿಕವಾಗಿ ಹಿಂದುಳಿದಿರುವ ಎಲ್ಲಾ ವರ್ಗದವರಿಗೆ ಚಲಿಸುವ ನಿಧಿಗೆ ಸಮನಾಗಿದೆಯೆಂದರೆ ಅತಿಶಯೋಕ್ತಿಯೆನಿಸಲಾರದು.

ಸುಭೀಕ್ಷೆಗೆ ತಳಿಗಳ ಅಭಿವೃದ್ಧಿಯೇ ಮೂಲ ಹಾಗು ತೆರೆದ ಬಾಗಿಲು. ಈ ದಿಸೆಯಲ್ಲಿ ಇಲಾಖೆಯು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮಂಡಳಿಯ ಮೂಲಕ ಆಸಕ್ತ ರೈತರಿಗೆ ತಳಿ ಸಂವರ್ಧನೆಗಾಗಿ ಉತ್ತಮ ದೇಶಿಯ ಟಗರು ಅಥವಾ ವಿದೇಶೀಯ ಟಗರನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ.

# ಕೋಳಿ ಸಾಕಾಣಿಕೆ





ಕೋಳಿ ಸಾಕಾಣಿಕೆ ನಮ್ಮಲ್ಲಿ ಒಂದು ಪುರಾತನ ಉದ್ಯೋಗ. ಆದರೆ ಈಗ ಕೋಳಿಸಾಕಣೆ ಒಂದು ಲಾಭದಾಯಕ ಉದ್ಯಮವೆಂದು ಕಂಡುಕೊಂಡಿದ್ದೇವೆ. ಕೋಳಿಗಳು ಕಡಿಮೆ ಆಹಾರ ಹಾಗು ವರ್ಜಿತ ಪದಾರ್ಥಗಳನ್ನು ತಿಂದು ನಮಗೆ ಪ್ರಾಣಿಜನ್ಯ ಪ್ರೋಟೀನುಗಳನ್ನು ಒದಗಿಸುತ್ತವೆ. ಕೋಳಿ ಗಾತ್ರದಲ್ಲಿ ಚಿಕ್ಕದು, ತಿನ್ನುವ ಆಹಾರ ಕಡಿಮೆ, ಅದಕ್ಕೆ ಬೇಕಾಗುವ ಸ್ಥಳಾವಕಾಶ ಕಡಿಮೆ, ಕೋಳಿ ಸಾಕಾಣಿ ಸುಲಭ.

ಶ್ರಮ ಕಡಿಮೆ, ಲಾಭ ಹೆಚ್ಚು. ಇವೆಲ್ಲವನ್ನು ಪರಿಗಣಿಸಿದಾಗ ಕೋಳಿಸಾಕಾಣಿ ಬಡವನಿಗೂ ಎಟುಕುವ ಉದ್ಯೋಗ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಕಸುಬು. ಬಹುಮಂದಿಗೆ ದಿನನಿತ್ಯ ಹಣಗಳಿಸುವ, ಅವರ ಆರ್ಥಿಕ ಮಟ್ಟವನ್ನು ಸುಧಾರಿಸುವ ಕಸುಬು.

ಈ ದಿಶೆಯಲ್ಲಿ ಇಲಾಖೆಯು ತಾಲ್ಲೂಕಿನ ರೈತರಿಗೆ ಗಿರಿರಾಜ ಕೋಳಿಗಳನ್ನು ರಿಯಾಯಿತಿ ದರದಲ್ಲಿ ಸರಬರಾಜು ಮಾಡುತ್ತಿದ್ದು, ಗ್ರಾಮೀಣ ಜನತೆಯ ಆರ್ಥಿಕ ಮಟ್ಟವನ್ನು ಹೆಚ್ಚಿಸಿ ಕೌಟುಂಬಿಕವಾಗಿ ಸಬಲೀಕರಣರಾಗಲು  ನೆರವಾಗುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಗಿರಿರಾಜ ಉತ್ತಮ ಗುಣಮಟ್ಟದ ಹಾಗೂ ಅಧಿಕ ಪ್ರಮಾಣದ ಮಾಂಸೋತ್ಪನ್ನ ನೀಡುತ್ತದೆ. ಇದು ಯಾವುದೇ ನಾಟಿಕೋಳಿಯಂತೆ ಜೀವಿಸಬಲ್ಲದು. ಗಿರಿರಾಜನಿಗೆ ಯಾವುದೇ ಬಗೆಯ ಅತ್ಯಾಧುನಿಕ ಇಲ್ಲವೇ ನವೀನ ರೀತಿಯಲ್ಲಿ ಆರೈಕೆ ನೀಡುವ ಅವಶ್ಯಕತೆಯಿರುವುದಿಲ್ಲ.

ಈ ಎಲ್ಲಾ ಅನುಕೂಲತೆಗಳನ್ನು ಗಮನಿಸಿದಾಗ ಸಣ್ಣ ಪ್ರಮಾಣದಲ್ಲಿ ಮನೆಯ ಸುತ್ತಲ ಆವರಣ ಇಲ್ಲವೇ ಹಿತ್ತಲಿನಲ್ಲಿ ಹೆಚ್ಚು ಖರ್ಚಿಲ್ಲದೇ ಕೋಳಿ ಸಾಕಣೆ ಮಾಡಬಯಸುವವರಿಗೆ ಗಿರಿರಾಜ/ಗಿರಿರಾಣಿ ಒಂದು ವರದಾನವಾಗಿದೆ.

# ಮೇವು ಅಭಿವೃದ್ಧಿ ಕಾರ್ಯಕ್ರಮಗಳು

ಸಾಕು ಪ್ರಾಣಿಗಳಿಗೆ ಕೊಡುವ ಸಸ್ಯಗಳನ್ನು ಸಾಮಾನ್ಯವಾಗಿ ಮೇವಿನ ಬೆಳೆಗಳು ಎಂದು ಕರೆಯಲಾಗುವುದು. ಈ ಸಾಕು ಪ್ರಾಣಿಗಳನ್ನು ಸ್ವತಂತ್ರವಾಗಿ ಮೇಯಲು ಬಿಡುವುದು, ಇಲ್ಲವೇ ಬೆಳೆದ/ಬೆಳೆಸಿದ ಮೇವನ್ನು ಕೊಯ್ದು ತಂದು ಅವುಗಳ ಆಹಾರ ಪೂರೈಸಲಾಗುವುದು.

ಕೆಲವು ವರ್ಷಗಳ ಹಿಂದೆ ಜಾನುವಾರುಗಳು ಮೇಯಲೆಂದೇ ತಮ್ಮ ತಮ್ಮ ಜಮೀನಿನಲ್ಲಿ ಸ್ವಲ್ಪ ಜಾಗವನ್ನು ಕಾಯ್ದಿರಿಸುತ್ತಿದ್ದರು. ಜೊತೆಗೆ ಹುಲ್ಲುಗಾವಲು ಮತ್ತು ಗೋಮಾಳಗಳನ್ನು ಸಹ ಹೊಂದಲಾಗಿತ್ತು. ಆದರೆ ಬದಲಾಗುತ್ತಿರುವ ಪರಿಸ್ಥಿತಿ ಮತ್ತು ಆಧುನಿಕತೆ ಇವುಗಳಿಗೆ ಅವಕಾಶವಿಲ್ಲದಾಗಿದ್ದು, ಜಾನುವಾರುಗಳ ಉತ್ಪಾದನೆಯಲ್ಲಿ ವಿವಿಧ ಕೊರತೆ ಕಂಡುಬರುತ್ತಿದೆ.

ಉತ್ಪಾದನೆಯ ಹೆಚ್ಚಳಕ್ಕಾಗಿ ಸಂಕರಣ ಪದ್ಧತಿಯಲ್ಲಿ ಜಾನುವಾರುಗಳ ವಂಶಾಭಿವೃದ್ಧಿಗೆ ವಿಶೇಷ ಗಮನವನ್ನು ಕೊಡುತ್ತಿರುವುದರಿಂದ ಮೇವಿನ ಬಗ್ಗೆ ಎಲ್ಲಾ ರೀತಿಯ ಕಾಳಜಿ ವಹಿಸುವುದು ಅತಿ ಅವಶ್ಯಕ.

ಇದನ್ನೆಲ್ಲಾ ಮನಗಂಡು ಇಲಾಖೆಯು ತಾಲ್ಲೂಕಿನಲ್ಲಿ ಸಾಕು ಪ್ರಾಣಿಗಳ ಮೇವು ಪುರೈಕೆಗಾಗಿ ಮೇವಿನ ಬೀಜದ ಮಿನಿಕಿಟ್‌ಗಳನ್ನು ರೈತರಿಗೆ ಉಚಿತವಾಗಿ ನೀಡುತ್ತಿದೆ.

ಸಾಕು ಪ್ರಾಣಿಗಳ ಮೇವು ಪೂರೈಕೆಗಾಗಿ ಹಿಂದಿನಿಂದ ಬಂದಿರುವ ಪದ್ಧತಿಯಲ್ಲಿ ಕೆಲವು ಸೂಕ್ತ ಬದಲಾವಣೆಗಳನ್ನು ತರುವುದರ ಜೊತೆಗೆ ಮೇವಿನ ಬೆಳೆಗಳೆಂದೇ ಅಭಿವೃದ್ಧಿ ಪಡಿಸಿರುವ ಉತ್ತಮವಾಗಿ ಬೆಳೆಯುವ ಹೆಚ್ಚು ಪೌಷ್ಠಿಕಾಂಶಗಳಿಂದ ಕೂಡಿದ ಬಹುವಾರ್ಷಿಕ ಮೇವಿನ ಬೇರುಗಳನ್ನು ಕೂಡ ರೈತರಿಗೆ ಸರಬರಾಜು ಮಾಡುತ್ತಾ ಇಲಾಖೆಯು ಜಾನುವಾರುಗಳ ಮೇವಿನ ಬೇಡಿಕೆಯನ್ನು ಪೂರೈಸುವತ್ತ ದಿಟ್ಟ ಪ್ರಯತ್ನ ಮುಂದುವರಿಸುತ್ತಿದೆ. ಇದಲ್ಲದೆ ತಾಲ್ಲೂಕಿನಲ್ಲಿ ಸರ್ಕಾರದ ಮೇವು ಪೌಷ್ಠೀಕರಣ ಕಾರ್ಯಕ್ರಮದಡಿ ಕೊರತೆಯ ಕಾಲದಲ್ಲಿ ಉಪಯೋಗಿಸುತ್ತಿರುವ ಕಡಿಮೆ ಪೌಷ್ಠಿಕಾಂಶಗಳಿಂದ ಕೂಡಿದ ಭತ್ತದ ಹುಲ್ಲು/ರಾಗಿ ಹುಲ್ಲು ಹಾಗು ಜೋಳದ ಕಡಬಿ ಮುಂತಾದವುಗಳನ್ನು ವಿಶೇಷ ರೀತಿಯಲ್ಲಿ ಸಂಸ್ಕರಿಸಿ ಕೊಡುವುದರಿಂದ ಉತ್ಪಾದನೆಯಲ್ಲಿ ಕುಂಠಿತವಾಗುವುದನ್ನು ತಡೆಯುವುದೇ ಅಲ್ಲದೆ ಹೆಚ್ಚಳವನ್ನು ಸಹ ಸಾಧಿಸಬಹುದು.

**ಒಳ ಮತ್ತು ಹೊರ ಪರೋಪಜೀವಿಗಳ ನಿವಾರಣಾ ಕಾರ್ಯಕ್ರಮ(ಜಂತುನಾಶಕ ಔಷಧಿಗಳು)**

ಪರೋಪ ಜೀವಿಗಳು ಅಥವಾ ಜಂತುಹುಳುಗಳು ಜಾನುವಾರುಗಳ ಆರೋಗ್ಯ ಹಾಗು ಉತ್ಪಾದನಾ ಸಾಮರ್ಥ್ಯದಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ವಿಶೇಷವಾಗಿ ಎಳೆಯ ವಯಸ್ಸಿನ ಕರುಗಳ ಬೆಳವಣಿಗೆಯಲ್ಲಿ ಅಡ್ಡಿಪಡಿಸಿ ಕುಂಠಿತವಾಗುವಂತೆ ಮಾಡುತ್ತವೆ.(ವಿಶೇಷವಾಗಿ ಎಮ್ಮೆ ಕರುಗಳಿಗೆ)ಆಗ ತಾನೆ ಜನಿಸಿದ ಕರುಗಳ ಹೊಟ್ಟೆ ಹಾಗು ಸಣ್ಣ ಕರುಳಿನಲ್ಲಿ ಕೂಡ ಜಂತುಹುಳುಗಳಿರುತ್ತವೆ. ತಾಲ್ಲೂಕಿನಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಜಾನುವಾರುಗಳಿಗೆ ಉಚಿತವಾಗಿ ಜಂತುನಾಶಕ ಔಷಧಿ ಹಾಗು ಮಾತ್ರೆಗಳನ್ನು ವಿತರಿಸಲಾಗುತ್ತಿದೆ.

## ವಿಸ್ತರಣಾ ಚಟುವಟಿಕೆಗಳು

ಪಶುಸಂಗೋಪನಾ ಇಲಾಖೆಯಲ್ಲಿನ ವಿಸ್ತರಣಾ ವಿಭಾಗವು ಸದಾ ಕಾರ್ಯಚಟುವಟಿಕೆಯಿಂದ ಕೂಡಿದೆ. ತಾಲ್ಲೂಕಿನಲ್ಲಿ ಪಶುಸಂಗೋಪನಾ ವಿಸ್ತರಣಾಧಿಕಾರಿಗಳು ರೈತರೊಂದಿಗೆ ಒಂದಿಲ್ಲೊಂದು ಕಾರ್ಯಕ್ರಮ ನಡೆಸುವುದರಿಂದ ಸದಾ ಕಾರ್ಯತತ್ಪರರಾಗಿದ್ದು, ರೈತರೊಂದಿಗೆ ಇಲಾಖೆಯ ಒಡನಾಟವನ್ನು ಹಸಿರಾಗಿಸಿದ್ದಾರೆ.

ಪ್ರತಿ ಮಾಹೆಯಲ್ಲಿ ಕಿಸಾನ್ ಸಂಪರ್ಕ ಸಭೆಯನ್ನು ಏರ್ಪಡಿಸಲಾಗುತ್ತಿದೆ. ಅಲ್ಲಿ ತಳಿ ಅಭಿವೃದ್ಧಿ ತಂತ್ರಜ್ಞಾನ, ವೈಜ್ಞಾನಿಕ ಜಾನುವಾರು ಸಾಕಾಣಿಕಾ ವಿಧಾನಗಳು, ಸಮತೋಲನ ಆಹಾರದ ಪ್ರಾಮುಖ್ಯತೆ ಹಾಗು ಅದರಿಂದಾಗುವ ಉಪಯೋಗಗಳು ಮುಂತಾದ ಹಲವಾರು ವಿಷಯಗಳನ್ನು ಆಧುನಿಕ ಮಾಧ್ಯಮ ಸಲಕರಣೆಗಳ ಮೂಲಕ ಸಂವಹನ ಕಾರ್ಯವನ್ನು ನಿಯಮಿತವಾಗಿ ನಿರ್ವಹಿಸಲಾಗುತ್ತಿದೆ.

ಇನ್ನೂ ಗ್ರಾಮ ಸಭೆಗಳಲ್ಲಿ ಕೂಡ ಗ್ರಾಮೀಣ ಭಾಗದ ರೈತರಿಗೆ ಇಲಾಖಾ ಕಾರ್ಯಚಟುವಟಿಕೆಗಳು ಹಾಗು ಕಾರ್ಯಕ್ರಮಗಳ ಬಗ್ಗೆ ವಿಚಾರಗಳನ್ನು ತಲುಪಿಸುವ ಕಾರ್ಯವನ್ನು ನಿರಂತರವಾಗಿ ಮಾಡಲಾಗುತ್ತಿದೆ.

## ಉಚಿತ ಆರೋಗ್ಯ ತಪಾಸಣೆ ಹಾಗು ಬಂಜೆತನ ನಿವಾರಣಾ ಶಿಬಿರಗಳು

ಪಶುಸಂಗೋಪನೆಯು ಲಾಭದಾಯಕವಾಗಿ ನಡೆಯಬೇಕಾದರೆಹಸುವು 14 ತಿಂಗಳಿಗೊಂದು ಕರು ಹಾಕುವುದು ಅಪೇಕ್ಷಣೀಯ ಹಾಗು ಅನಿವಾರ್ಯ ಕೂಡ. ಇಲ್ಲದಿದ್ದಲ್ಲಿ ಪಶು ಆಹಾರದ ಬೆಲೆಯ ವೈಪರೀತ್ಯದಿಂದಾಗಿ ಇದು ಲಾಭದಾಯಕ ಉದ್ಯಮವೆನಿಸುವುದಿಲ್ಲ.

ಇಂದು ಹೈನುಗಾರಿಕಾ ರಾಸುಗಳ ನಿರ್ವಹಣೆ ಬಹಳ ತ್ರಾಸದಾಯಕ. ಜಾನುವಾರುಗಳಿಗೆ ಒದಗಿಸುವ ಆಹಾರ, ನೀರು, ವಾಸಯೋಗ್ಯ ಕೊಟ್ಟಿಗೆ,ರೋಗರುಜಿನಗಳು ಇತ್ಯಾದಿ ಅಂಶಗಳು ನಮ್ಮ ರೈತರು ಹಸುವಿನಿಂದ 14 ತಿಂಗಳಿಗೊಮ್ಮೆ ಕರುವನ್ನು ಪಡೆಯಲು ಕಷ್ಟಸಾಧ್ಯವಾಗುತ್ತಿದೆ. ಪಶುಗಳಲ್ಲಿ ಬಂಜೆತನ ಮನೆಮಾಡಿ ರೈತನನ್ನು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿಸಿದೆ. ಇಲಾಖೆಯು ಇದನ್ನೆಲ್ಲಾ ಮನಗಂಡು ನಿರಂತರವಾಗಿ ಪಶುಗಳ ಬಂಜೆನಿವಾರಣಾ ಶಿಬಿರಗಳನ್ನು ನಡೆಸುತ್ತಿದೆ. ಈ ಶಿಬಿರದಲ್ಲಿ ಗರ್ಭ ಧರಿಸದ ರಾಸುಗಳನ್ನು ತಜ್ಞ ವೈದ್ಯರುಗಳು ಸಂಪೂರ್ಣವಾಗಿ ಪರೀಕ್ಷಿಸಿ ಅವುಗಳಿಗೆ ಅವಶ್ಯಕವಾದ ಚಿಕಿತ್ಸೆ,ಸಲಹೆ ಸೂಚಿಗಳನ್ನು ನೀಡುತ್ತಾರೆ.

ತಾಲ್ಲೂಕಿನಲ್ಲಿ ತಜ್ಞ ವೈದ್ಯರುಗಳ ತಂಡವು ಈ ಮಹತ್ಕಾರ್ಯವನ್ನು ಸದಾ ಸರ್ವದಾ ಮಾಡುತ್ತಾ ಬಂದಿದೆ. ಇಂತಹ ಶಿಬಿರಗಳಲ್ಲಿ ಸಾಮೂಹಿಕವಾಗಿ ರಾಸುಗಳಿಗೆ ಜಂತುನಾಶಕ ಔಷಧಿಗಳನ್ನು ಕುಡಿಸಲಾಗುತ್ತದೆ. ಆಯಾ ಕಾಲಕ್ಕೆ ಅವಶ್ಯಕವಾಗಿ ನೀಡಬೇಕಾದ ಮುಂಜಾಗ್ರತಾ ಲಸಿಕೆಗಳನ್ನು ಹಾಕಲಾಗುತ್ತದೆ. ಶಿಬಿರದಲ್ಲಿ ಜಾನುವಾರುಗಳಿಗೆ ಉಚಿತವಾಗಿ ಲವಣ ಮಿಶ್ರಣಗಳು, ಗರ್ಭಧರಿಸಲು ಸಹಕಾರಿಯಾಗುವಂತಹ ಉತ್ತಮವಾದ ಪ್ರಚೋದಕಗಳು ಮುಂತಾದವುಗಳನ್ನು ನೀಡಲಾಗುತ್ತಿದೆ.

ಈ ಶಿಬಿರಗಳನ್ನು ಏರ್ಪಡಿಸುವುದಷ್ಟೇ ಅಲ್ಲದೆ ಶಿಬಿರದಲ್ಲಿ ಬಂಜೆತನ ನಿವಾರಣಾ ಚಿಕಿತ್ಸೆ ನೀಡಿದ ರಾಸುಗಳ ಅನುಪಾಲನೆಯನ್ನು ಕೂಡ ತುಂಬಾ ಅಚ್ಚುಕಟ್ಟಾಗಿ ನಿರ್ವಹಿಸಲಾಗುತ್ತಿದೆ.

## ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳು

ಯಾವುದೇ ಒಂದು ಸಮಾಜವು ಸ್ವಾಸ್ಥತೆಯನ್ನು ಕಾಪಾಡಿಕೊಂಡು ಬರಲು ಅಲ್ಲಿನ ಸದಸ್ಯರ ಆರ್ಥಿಕ ಸ್ವಾಸ್ಥ್ಯವು ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ಇಲಾಖೆಯು ಸರಕಾರದ ಸಾಮಾಜಿಕ ಹಾಗು ಆರ್ಥಿಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

- ವಿಶೇಷ ಘಟಕ ಯೋಜನೆ : ಈ ಯೋಜನೆಯಲ್ಲಿ ಪರಿಶಿಷ್ಠ ಜಾತಿ ಫಲಾನುಭವಿಗಳಿಗೆ ಜಾನುವಾರುಗಳನ್ನು ಸಹಾಯಧನ ನೀಡಿ ವಿತರಿಸಲಾಗುತ್ತದೆ. ಈ ಯೋಜನೆಯಡಿ ಶೇ.60% ಸಹಾಯಧನ ಹಾಗು ಶೇ.40% ಸಾಲದ ಮೊತ್ತ ಒಳಗೊಂಡಿರುತ್ತದೆ.
- ಗಿರಿಜನ ಉಪಯೋಜನೆ : ಪರಿಶಿಷ್ಠ ಪಂಗಡದ ಶ್ರೇಯೋಭಿವೃದ್ಧಿಗಾಗಿಯೇ ಆರಂಭಿಸಿದ ವಿಶೇಷ ಯೋಜನೆ ಇದಾಗಿದೆ. ಈ ಯೋಜನೆಯಡಿಯಲ್ಲಿ ಶೇ.75% ಸಹಾಯಧನ ಹಾಗು ಶೇ.25% ಸಾಲವನ್ನು ಒದಗಿಸಿಕೊಡಲಾಗುತ್ತದೆ. ಇದರಲ್ಲಿ ಜಾನುವಾರುಗಳನ್ನು ಖರೀದಿಸಿ ಸಾಕಾಣಿಕೆ ಮಾಡಲು ಅವಕಾಶ ಮಾಡಿಕೊಡಲಾಗುತ್ತದೆ.

ಸಾಮಾಜಿಕವಾಗಿ ಹಾಗು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳಿಗೆ ಸದರಿ ಯೋಜನೆಗಳು ಒಂದು ವರದಾನವಾಗಿದೆ.

## ಆತ್ಮ ಯೋಜನೆ

**೦ಙಖಿಒಂ- ೦ರಡಿಛುಟಿಣಟಣಣಡಿಚಿಟ ಖಿಜಛುಟಿಠಟಠರಥಿ ಒಚಿಟಿಚಿರಜಟಜಟಿಣ ೦ರಜಟಿಛಿಥಿ**

ಈ ಯೋಜನೆಯಡಿಯಲ್ಲಿ ಗ್ರಾಮೀಣ ಭಾಗದ ರೈತರಿಗೆ ಕುಟುಂಬದ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ಪಶುಸಂಗೋಪನಾ ಕಾರ್ಯಕ್ರಮಗಳನ್ನು ಒದಗಿಸಿಕೊಡಲಾಗುತ್ತದೆ. ಹೈನುಗಾರಿಕೆಯ ಆಧುನಿಕ ವಿಧಾನಗಳು, ಆಹಾರ ನೀಡುವಿಕೆ, ನೈರ್ಮಲ್ಯ, ರೋಗ ಹತೋಟಿ ಕ್ರಮಗಳು, ಮೇವಿನ ಬೆಳೆಗಳ ಪ್ರಾತ್ಯಕ್ಷತೆ, ಕುಟುಂಬದ ಆರ್ಥಿಕ ಸಬಲೀಕರಣಕ್ಕಾಗಿ ಕುರಿ ಮತ್ತು ಆಡುಗಳ ಸಾಕಾಣಿಕೆ, ಹಿತ್ತಲಲ್ಲಿ ಕೋಳಿ ಸಾಕಾಣೀಕೆ ಇವೇ ಮೊದಲಾದ ಕಾರ್ಯಕ್ರಮಗಳನ್ನು ತರಬೇತಿ ಹಾಗು ಪ್ರಾತ್ಯಕ್ಷತೆ ನೀಡುವುದರ ಮೂಲಕ ರೈತರಲ್ಲಿ ವೈಜ್ಞಾನಿಕ ಪಶುಪಾಲನೆ ಬಗ್ಗೆ ಒಂದು ಸಿಂಚನ ಮೂಡಿಸುವಲ್ಲಿ ನಿರತವಾಗಿದೆ.

## ಪ್ರಧಾನ ಮಂತ್ರಿಗಳ ವಿಶೇಷ ಅಭಿವೃದ್ಧಿ ಯೋಜನೆ

ಕೆಲವು ವರ್ಷಗಳ ಹಿಂದೆ ಬರಗಾಲ ಹಾಗು ಅದರ ಪರಿಣಾಮದಿಂದ ಕೆಲವು ರೈತರು ಆತ್ಮಹತ್ಯೆಗೆ ಶರಣಾದ ನೋವಿನ ಸಂಗತಿ ನಮಗೆಲ್ಲ ತಿಳಿದಿದೆ. ಈ ಪಿಡುಗಿನಿಂದ ಹೊರಬಂದು ನೆಮ್ಮದಿಯ ಜೀವನ ನಡೆಸಲು ಭಾರತ ಸರ್ಕಾರವು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಿದೆ. ಇದರಲ್ಲಿ ಹಾಸನ ಜಿಲ್ಲೆಯೂ ಒಂದು.

ಈ ಯೋಜನೆಯಡಿಯಲ್ಲಿ ಆತ್ಮಹತ್ಯೆಗೊಳಗಾದ ಕುಟುಂಬದ ನೆರವು ನೀಡಲಾಗುವುದು. ಗರ್ಭ ಧರಿಸಿದ ರಾಸುಗಳು, ಕುಂಠಿತ ಬೆಳವಣಿಗೆ ಹೊಂದಿದ ರಾಸುಗಳಿಗೆ ಶೀಘ್ರ ಚೇತರಿಸಿಕೊಂಡು ಪುನಃ ಉತ್ಪಾದನಗೊಳಪಡಲು ಸಹಕಾರಿಯಾಗುವಂತಹ ಔಷಧಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಈ ಯೋಜನೆಯಡಿಯಲ್ಲಿ ನೊಂದ ಕುಟುಂಬಗಳನ್ನು ಗುರುತಿಸಿ, ಅವುಗಳನ್ನು ಆಯ್ಕೆ ಮಾಡಿ ಅವರಿಗೆ ಮಿಶ್ರತಳಿ ಹಸುಗಳನ್ನು ಸಹಾಯಧನ ನೀಡಿ ಸಾಲಸೌಲಭ್ಯ ಒದಗಿಸಲಾಗುತ್ತಿದೆ. ಈ ಯೋಜನೆಯ ಒಟ್ಟು ಘಟಕದ ಮೊತ್ತವು ರೂ.೬೦೦೦೦/- ಆಗಿದ್ದು, ಅದರಲ್ಲಿ ರೂ.೩೦೦೦೦/- ಸಹಾಯಧನ ಹಾಗೂ ರೂ.೩೦೦೦೦/- ಸಾಲಸೌಲಭ್ಯ ಒಳಗೊಂಡಿರುತ್ತದೆ. ಇದರಲ್ಲಿ ಖರೀದಿಸಿದ ಜಾನುವಾರುಗಳಿಗೆ ಸಮತೋಲನ ಆಹಾರ ನೀಡಲು ಸಹ ಸಹಾಯಧನ ಸೌಲಭ್ಯವಿದೆ.

ಸದರಿ ಯೋಜನೆಯಡಿಯಲ್ಲಿ ವಿತರಿಸಿದ ಮಿಶ್ರ ತಳಿ ಹಸುಗಳಲ್ಲಿ ಜನಿಸಿದ ಹೆಣ್ಣು ಕರುಗಳ ಪೋಷಣೆಗಾಗಿ ಸಮತೋಲನ ಆಹಾರ ನೀಡಲು ಸಹಾಯಧನ ವಿತರಿಸಲಾಗುತ್ತಿದೆ.

18 ನೇ ಜಾನುವಾರು ಗಣತಿ (೨೦೦೭)ಯಂತೆ ತಾಲ್ಲೂಕಿನಲ್ಲಿ ಒಟ್ಟು 1,98,000 ಜಾನುವಾರುಗಳು ಹಾಗೂ 96000 ಕುಕ್ಕುಟಗಳ ಅಪಾರ ಸಂಖ್ಯೆಯಿದ್ದು, ಇವುಗಳ ದೈನಂದಿನ ಆರೋಗ್ಯ ರಕ್ಷಣೆಯಂತಹ ಮಹತ್ತರ ಕಾರ್ಯವನ್ನು ತೀವ್ರ ಸಿಬ್ಬಂದಿ ಹಾಗೂ ಸೌಲಭ್ಯಗಳ ಕೊರತೆಯ ನಡುವೆಯೂ ಶ್ರದ್ಧೆಯಿಂದ ನಿರ್ವಹಿಸಲಾಗುತ್ತಿದೆ.